ನಂ. 1893
ತಾ. 1/9/2023
ಕರ್ನಾಟಕ ಸರ್ಕಾರ
ಸಂಗ್ರಹಾಲಯಗಳು ಮತ್ತು ಪರಂಪರೆ ... ಮೈಸೂರು

# ಕರ್ನಾಟಕ ಸರ್ಕಾರ

ಸಂಖ್ಯೆ: ಟಿಓಆರ್ 20 ಟಿಡಿಎ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 23-08-2023

## ಅಧಿಸೂಚನೆ

ಕರ್ನಾಟಕ ಸರ್ಕಾರವು ಪರಿವಿಡಿಯಲ್ಲಿ ವಿವರಿಸಿರುವ ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ವಿಷ್ಣುಸಮುದ್ರ ಗ್ರಾಮದ ಶ್ರೀ ಅಮೃತೇಶ್ವರ ದೇವಾಲಯ, ಮಂಟಪಗಳು ಮತ್ತು ಪುಷ್ಕರಣಿಗಳನ್ನು ಒಳಗೊಂಡ ಸ್ಮಾರಕಗಳ ಸಮುಚ್ಚಯವನ್ನು "ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961ರ ಕಲಂ 19(3)ರ ಅಡಿ" 'ರಾಜ್ಯ ಸಂರಕ್ಷಿತ ಪ್ರದೇಶ'ವನ್ನಾಗಿ ಘೋಷಿಸಲು ಅಭಿಪ್ರಾಯಪಟ್ಟು, ಈ ಸ್ಮಾರಕ ಸಮುಚ್ಚಯಗಳನ್ನು ರಾಜ್ಯ ಸಂರಕ್ಷಿತ ಪ್ರದೇಶವೆಂದು ಘೋಷಿಸುವುದರಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಹೊರಡಿಸಲಾಗಿದ್ದ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು. ಈ ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ಪ್ರದೇಶಗಳೆಂದು ಘೋಷಿಸುವ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳು ಸಾರ್ವಜನಿಕರಿಂದ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961ರ ಕಲಂ 19(3)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪರಿವಿಡಿಯಲ್ಲಿ ವಿವರಿಸಿರುವ ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ವಿಷ್ಣುಸಮುದ್ರ ಗ್ರಾಮದ ಶ್ರೀ ಅಮೃತೇಶ್ವರ ದೇವಾಲಯ, ಮಂಟಪಗಳು ಮತ್ತು ಪುಷ್ಕರಣಿಗಳನ್ನು ಒಳಗೊಂಡ ಸ್ಮಾರಕಗಳ ಸಮುಚ್ಚಯವನ್ನು 'ರಾಜ್ಯ ಸಂರಕ್ಷಿತ ಪ್ರದೇಶ'ವೆಂದು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Vimala 23/08/2023

**(ವಿಮಲಾಕ್ಷಿ ಬಿ.)**
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

31/8/23

**ಇವರಿಗೆ,**

ಇ-ರಾಜ್ಯಪತ್ರದಲ್ಲಿ ಪ್ರಕಟಿಸಲು, ಸಂಕಲನಾಧಿಕಾರಿ, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಆನ್ ಲೈನ್ ಮೂಲಕ ಸಲ್ಲಿಸಿದೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್ ಎ) ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು - 560001.
2. ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ, ಮೈಸೂರು.
3. ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ.
4. ತಹಶೀಲ್ದಾರ್, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

31.08.2023
31/8

ಪರಿವಿಡಿ

ಅಧಿಸೂಚನೆ ಸಂಖ್ಯೆ: ಟಿಒಆರ್ 20 ಟಿಡಿಎ 2023, ದಿನಾಂಕ: 23-08-2023.

| ಕ್ರ. ಸಂ | ಜಿಲ್ಲೆ | ತಾಲ್ಲೂಕು | ಇರುವ ಸ್ಥಳ | ಸ್ಮಾರಕ/ ಕಟ್ಟಡದ ಹೆಸರು | ಸಂರಕ್ಷಣೆಗೆ ಒಳಪಡುವ ರೆವಿನ್ಯೂ ನಿವೇಶನ ಮತ್ತು ವಿಸ್ತೀರ್ಣ | ಮೇರೆಗಳು (ಚಕ್ಕುಬಂದಿ) | | ಒಡೆತನ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | | 8 | 9 |
| 1 | ಹಾಸನ | ಬೇಲೂರು | ವಿಷ್ಣು ಸಮುದ್ರ | ಶ್ರೀ ಅಮೃತೇಶ್ವರ ದೇವಾಲಯ, ಮಂಟಪಗಳು ಹಾಗೂ ಪುಷ್ಕರಣಿ ಒಳಗೊಂಡ ಸಮುಚ್ಛಯ | ಸ.ನಂ.13ರಲ್ಲಿ 0.05 ಗುಂಟೆ ಹಾಗೂ ಸ.ನಂ.34 ರಲ್ಲಿ 0.15 ಗುಂಟೆ **ಒಟ್ಟಾರೆ 0.20 ಗುಂಟೆ** | ಪೂರ್ವಕ್ಕೆ | ಭೀಷ್ಮಮ್ಮನ ಕೆರೆ | ಮುಜರಾಯಿ | 12ನೇ ಶತಮಾನಕ್ಕೆ ಸೇರಿದ ಪುರಾತನ ದೇವಾಲಯ, ಮಂಟಪಗಳು ಹಾಗೂ ಪುಷ್ಕರಣಿಯನ್ನು ಒಳಗೊಂಡ ಸ್ಮಾರಕಗಳ ಸಮುಚ್ಛಯವಾಗಿದೆ. |
| | | | | | | ಪಶ್ಚಿಮಕ್ಕೆ | ಪುರಸಭೆ ಪ್ರದೇಶ | | |
| | | | | | | ಉತ್ತರಕ್ಕೆ | ರಸ್ತೆ | | |
| | | | | | | ದಕ್ಷಿಣಕ್ಕೆ | ಭೀಷ್ಮಮ್ಮನ ಕೆರೆ | | |

B. Vimala 23/08/2023

(ವಿಮಲಾಕ್ಷಿ ಬಿ.)

ಸರ್ಕಾರದ ಅಧೀನ ಕಾರ್ಯದರ್ಶಿ

ಪ್ರವಾಸೋದ್ಯಮ ಇಲಾಖೆ